<u>ಅಸಲು ದಾವಾ:-</u> 198/2014 ಪಿ.ಡಬ್ಲ್ಯೂ:- 3

ದಿನಾಂಕ: 04.08.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ.ಯು ಕೆ ವಕೀಲರಿಂದ</u>

ಎಲ್ಲಿಯವರೆಗೆ ಓದಿದ್ದೇನೆ ಎಂದರೆ 8 ನೇ ತರಗತಿ. ಕನ್ನಡ ಓದಲು ಬರೆಯಲು ಬರುತ್ತದಾ ಎಂದರೆ ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಹೌದು. ನನ್ನ ಜನ್ಮ ದಿನಾಂಕ ಯಾವುದು ಎಂದರೆ ದಿ: 01.01.1991 ಎಂದು ನುಡಿಯುತ್ತಾರೆ. ನಾನು ಯಾವಾಗ ವಯಸ್ಕನಾಗಿರುತ್ತೇನೆ ಎಂದರೆ ಸಾಕ್ಷಿಯು 2017–18 ಇರಬಹುದು ಎಂದು ನುಡಿಯುತ್ತಾರೆ.

ನಾನು 18 ವರ್ಷಗಳಿಗಿಂತ ಕಡಿಮೆ ವಯಸ್ಕನಿದ್ದಾಗ ವಾದಿಗಳು ಹಾಗೂ ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. ವಾದಿ ಮಹೇಶ್ವರಪ್ಪ ನನಗೆ ಏನಾಗಬೇಕು ಎಂದರೆ ಸಾಕ್ಷಿಯು ನನ್ನ ತಾಯಿಯ ತಂಗಿಯ ಗಂಡ ಅಂದರೆ ಚಿಕ್ಕಪ್ಪ ಆಗಬೇಕು ಎಂದು ನುಡಿಯುತ್ತಾರೆ. ಯಾವ ವಿಚಾರಕ್ಕೆ, ಯಾವ ಪರಿಹಾರಕ್ಕೆ ದಾವೆ ಹಾಕಿದ್ದಾರೆ ಎಂದರೆ ಗೊತ್ತಿಲ್ಲ ಆದರೆ ಜಮೀನಿನ ವಿಚಾರಕ್ಕೆ ದಾವೆ ಹಾಕಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 3 ನೇ ಪ್ಯಾರಾದ 2 ನೇ ಸಾಲಿನಲ್ಲಿ–ನನಗೆ ತಿಳಿದ ಹಾಗೇ ಸುಮಾರು 60 ವರ್ಷಗಳಿಂದ ವಾದಿ, ವಾದಿಯ ಗಂಡ ಹಾಗೂ ಅವರ ಪೌತಿ ನಂತರ ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ವಾದಿ ಮಹೇಶ್ವರಪ್ಪ ರವರ ಕೋರಿಕೆಯ ಮೇರೆಗೆ ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಬರೆಸಿರುತ್ತೇನೆ ಎಂದರೆ ಸರಿ. ದಾವೆಯ ಬಗ್ಗೆ ನನಗೆ ಏನು ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ